

ರೂ 12000/- ಕ್ಕೆ ಶುದ್ಧ ಕ್ರಯಪತ್ರ

ತಾ. 06.08.2001 ನೆನೆ ಎರಡು ಸಾವಿರದ ಒಂದನೆ ವರ್ಷ ಆಗಸ್ಟ್ ತಿಂಗಳು ತಾರೀಖು ಆರರಲ್ಲಿ ಕೊಳ್ಳೇಗಾಲ ತಾಲ್ಲೂಕು ಕೌದಳ್ಳಿ ಗ್ರಾಮದಲ್ಲಿ ವಾಸವಾಗಿರುವ ಬಣಜಿಗರ ಜಾತಿ ವೈವಾಯಿಯ ಜೀವನ ಕೆ.ಎಂ. ಮಹಾದೇವಪ್ಪನವರ ಮಗ ಕೆ.ಎಂ. ಶಿವಣ್ಣನವರಿಗೆ ಸದರಿ ತಾಲ್ಲೂಕ ಸದರಿ ಗ್ರಾಮದಲ್ಲಿರುವ ಮುದಲಿಯರ್ ಜಾತಿ ಸದರಿ ಜೀವನ ಲೇಟ್ ಮುರುಗ ಮೊದಲಿಯವರ ಮಗ ಎಂ. ರಾಮಸ್ವಾಮಿ ಆದನು ಬಿಟ್ಟಿ ಬರೆಯಿಸಿಕೊಟ್ಟ ಶುದ್ಧ ಕ್ರಯಪತ್ರ ಅದಾಗಿ ಷೆಡ್ಯೂಲ್ ಸೊತ್ತು ನನಗೆ ದಿನಾಂಕ 21-01-1994 ರಲ್ಲಿ ಎಂ. ಎನ್. ರಾಧಾಕೃಷ್ಣಶೆಟ್ಟಿಯವರ ಹೆಂಡತಿ ಸುಶೀಲಾರವರಿಂದ ಅನ್ ರಿಜಿಸ್ಟರ್ ಮೂಲಕ ಕ್ರಯಭಾಧ್ಯತೆಯ ನನ್ನ ಅನುಭವ ಸ್ವಾಧೀನದಲ್ಲಿರುವ ಷೆಡ್ಯೂಲ್ ಸೊತ್ತನ್ನು ಈ ದಿನ ನನ್ನ ಸಮಯ ನಿಮಿತ್ತ ಅಂದರೆ ನನ್ನ ಮಗಳ ಮದುವೆಯಲ್ಲಿ ಮಾಡಿರುವ ಸಾಲ ತೀರಿಸಲಿಕ್ಕಾಗಿ ಈ ದಿನದ ಬಜಾರುಬೆಲೆಗೆ ರೂ 12000/- ಹನ್ನೆರಡು ಸಾವಿರ ರೂಪಾಯಿಗಳಿಗೆ ನಿಮಗೆ ಶುದ್ಧ ಕ್ರಯಕ್ಕೆ ಕೊಟ್ಟು ಸದರಿ ಕ್ರಯ ಮೊಬಲಗು ಪೂರ್ತಿಯಾಗಿ ಈ ದಿನ ಈ ಕೆಳಕಂಡ ಸಾಕ್ಷಿಗಳ ಮುಖಾಂತರ ನಿಮ್ಮಿಂದ ನಾನು ತೆಗೆದುಕೊಂಡು ಷೆಡ್ಯೂಲ್ ಸೊತ್ತನ್ನು ಈ ದಿನದಿಂದ ನಿಮ್ಮ ಸ್ವಾಧೀನಕ್ಕೆ ಬಿಟ್ಟಿರುತ್ತೇನೆ. ಸದರಿ ಸೊತ್ತನ್ನು ಗ್ರಾಮ ಪಂಚಾಯಿತಿಯಲ್ಲಿ ನಿಮ್ಮ